ಅಧ್ಯಕ್ಷರು: ಕೇಳೋಣ

ಶ್ರೀ ಧರ್ಮಸಿಂಗ್: ಈಗಾಗಲೇ ಅವರು ಕಾರ್ಯದರ್ಶಿಯವರಿಗೆ ಆ ಬಗ್ಗೆ ಸೂಚನೆಯನ್ನು ಕೊಟ್ಟಿದ್ದಾರೆ. ಅದಕ್ಕೆ ಹೆಚ್ಚಿನ ಮಹತ್ವ ಕೊಟ್ಟು, ಚರ್ಚೆ ಮಾಡಲಿಕ್ಕೆ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು: ಮಾನ್ಯ ಸದಸ್ಯರು ಸೂಚನೆ ಕೊಟ್ಟಿರುವುದು ನನ್ನ ಗಮನಕ್ಕೆ ಬಂದಿಲ್ಲ. ಅದು ಕಾರ್ಯದರ್ಶಿಗಳ ಬಳಿ ಇರಬಹುದು. ಅದನ್ನು ನೋಡಿ, ಪರಿಶೀಲಿಸಿ ನಾನು ಚರ್ಚೆ ಮಾಡಲಿಕ್ಕೆ ಅವಕಾಶ ಮಾಡಿ ಕೊಡುತ್ತೇನೆ.

ಶ್ರೀ ಧರ್ಮಸಿಂಗ್: 'ಈ ಸಂಜೆ' ಪತ್ರಿಕೆಯಲ್ಲಿ ಗುಂಡೂರಾವ್ ಬಗ್ಗೆ ಪ್ರಕಟವಾಗಿರುವ ಬಗ್ಗೆ ಅವರಿಗೆ ನೋವು ಉಂಟಾಗಿದೆ. ಅವರಿಗೆ ಅದನ್ನು ಪ್ರಸ್ತಾಪಿಸಲು ತಾವು ಇವತ್ತೇ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು: ಆಯಿತು, ಪರಿಶೀಲಿಸಿ ಇವತ್ತೇ ಅದನ್ನು ಪ್ರಸ್ತಾಪಿಸಲು ಅವಕಾಶ ಮಾಡಿಕೊಡುತ್ತೇನೆ.

4. ಕಾರ್ಯದರ್ಶಿಯವರ ವರದಿ

ಅಪರ ಕಾರ್ಯದರ್ಶಿ: ಕಳೆದ ಅಧಿವೇಶನದಲ್ಲಿ ವರದಿಯನ್ನು ಒಪ್ಪಿಸಿದ ನಂತರ ರಾಜ್ಯಪಾಲಕರಿಂದ ಒಪ್ಪಿಗೆ ಪಡೆದ ವಿಧೇಯಕಗಳ ಪಟ್ಟಿಯನ್ನು ಸಭೆಯಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು: ಸಭೆಯ ಮುಂದಿಡಲಾದ ಕಾಗದಪತ್ರಗಳು ಮೊದಲನೇ ಪಟ್ಟಿ.

5. ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮುಖ್ಯಮಂತ್ರಿಗಳು) ಅವರು;

1978ರ ಕರ್ನಾಟಕ ರಾಜ್ಯ ನಾಗರೀಕ ಸೇವಾ ಅಧಿನಿಯಮ 8(3) ರ ಪ್ರಕರಣದ ಮೇರೆಗೆ:

1.1947 ರ ಕರ್ನಾಟಕ ನಾಗರೀಕ ಸೇವೆಗಳು (ಸೇವಾ ಮತ್ತು ಕನ್ನಡ ಭಾಷಾ ಪರೀಕ್ಷೆಗಳು) ನಿಯಮಗಳ ಅನುಸೂಚಿ 2ಕ್ಕೆ ತಿದ್ದುಪಡಿ

ಮಾಡಿ ದಿನಾಂಕ 27.04.2007 ರಂದು ಹೊರಡಿಸಲಾದ ಡಿಪಿಎಆರ್ 28 ಎಸ್ಎಸ್ಆರ್ 2006ನೇ ಸಂಖ್ಯೆಯ ಅಧಿಸೂಚನೆ.

2. 1997 ರ ಕರ್ನಾಟಕ ಗೆಜೆಟೆಡ್ ಪ್ರೊಬೇಷನರುಗಳ ನೇಮಕ (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇಮಕಾತಿ) (3ನೇ ತಿದ್ದುಪಡಿ) ನಿಯಮಗಳ ನಿಯಮ 5ಕ್ಕೆ ತಿದ್ದುಪಡಿ ಮಾಡಿ ದಿನಾಂಕ 02.05.2007 ರಂದು ಹೊರಡಿಸಲಾದ ಡಿಪಿಎಆರ್ 82 ಎಸ್ಆರ್ಆರ್ 2006ನೇ ಸಂಖ್ಯೆಯ ಅಧಿಸೂಚನೆ.

ಹಾಗೂ

3. 1957 ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳ ಅನುಸೂಚಿ IIಕ್ಕೆ ತಿದ್ದುಪಡಿ ಮಾಡಿ ದಿನಾಂಕ 04.05.2007 ರಂದು ಹೊರಡಿಸಲಾದ ಡಿಪಿಎಆರ್ 12 ಎಸ್ಡಿಇ 2006ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು ಮತ್ತು ಹಣಕಾಸು ಸಚಿವರು) ಅವರು;

1965 ರ ಕರ್ನಾಟಕ ಅಬಕಾರಿ ಕಾಯ್ದೆ 71(4) ರ ಪ್ರಕರಣದ ಮೇರೆಗೆ:

1.1967ರ ಕರ್ನಾಟಕ ಅಬಕಾರಿ (ಡಿಸ್ಟಿಲರಿ ಮತ್ತು ವೇರ್ಹೌಸ್) ನಿಯಮಗಳ ನಿಯಮ 4ಎ ನಂತರ 4ಬಿ ಮತ್ತು 4ಸಿ ಯನ್ನು ಸೇರ್ಪಡೆಗೊಳಿಸಿ ದಿನಾಂಕ 04.05.2007 ರಂದು ಹೊರಡಿಸಲಾದ ಎಫ್ಡಿ 23 ಪಿಇಎಸ್ 2006(1) ನೇ ಸಂಖ್ಯೆಯ ಅಧಿಸೂಚನೆ.

2. 1968ರ ಕರ್ನಾಟಕ ಅಬಕಾರಿ (ದ್ರಾಕ್ಷಿಯಿಂದ ವೈನ್ ತಯಾರಿಕೆ) ನಿಯಮಗಳ ಹೊಸ ನಿಯಮ 6ಎ ನಂತರ 6ಬಿ ಮತ್ತು 6ಸಿ ಯನ್ನು ಸೇರ್ಪಡೆಗೊಳಿಸಿ ದಿನಾಂಕ 04.05.2007 ರಂದು ಹೊರಡಿಸಲಾದ ಎಫ್ಡಿ 23 ಪಿಇಎಸ್ 2006(2) ನೇ ಸಂಖ್ಯೆಯ ಅಧಿಸೂಚನೆ.

3. 1967ರ ಕರ್ನಾಟಕ ಅಬಕಾರಿ (ಬ್ರೀವರಿ) ನಿಯಮಗಳ ಹೊಸ ನಿಯಮ 3ಎ ನಂತರ 3ಬಿ ಮತ್ತು 3ಸಿ ಯನ್ನು ಸೇರ್ಪಡೆಗೊಳಿಸಿ ದಿನಾಂಕ 04.05.2007ರಂದು ಹೊರಡಿಸಲಾದ ಎಫ್‌ಡಿ 23 ಪಿಇಎಸ್ 2006(3) ನೇ ಸಂಖ್ಯೆಯ ಅಧಿಸೂಚನೆ.

4. 1967ರ ಕರ್ನಾಟಕ ಅಬಕಾರಿ (ಡೀನೇಚರ್ಡ್ ಸ್ಪಿರಿಟ್ ಮತ್ತು ಡೀನೇಚರ್ಡ್ ಸ್ಪಿರಿಶ್ಯುಯಸ್ ಪ್ರಿಪರೇಷನ್) ನಿಯಮಗಳ ನಿಯಮ 5ಕ್ಕೆ ತಿದ್ದುಪಡಿ ಮಾಡಿ ದಿನಾಂಕ 25.05.2007 ಹೊರಡಿಸಲಾದ ಎಫ್‌ಡಿ 3 ಪಿಇಎಸ್ 2007(1) ನೇ ಸಂಖ್ಯೆಯ ಅಧಿಸೂಚನೆ.

5. 1967ರ ಕರ್ನಾಟಕ ಅಬಕಾರಿ (ಸಾಮಾನ್ಯ ಷರತ್ತುಗಳು) ನಿಯಮಗಳ ನಿಯಮ 17 (ಬಿ)ಗೆ ತಿದ್ದುಪಡಿ ಮಾಡಿ ದಿನಾಂಕ 25.05.2007 ರಂದು ಹೊರಡಿಸಲಾದ ಎಫ್‌ಡಿ 3 ಪಿಇಎಸ್ 2007(2) ನೇ ಸಂಖ್ಯೆಯ ಅಧಿಸೂಚನೆ.

6. 1990ರ ಕರ್ನಾಟಕ ಅಬಕಾರಿ (ಪರ್ಮಿಟ್ ಫೀ) ನಿಯಮಗಳ ನಿಯಮಗಳನ್ನು ನಿರಸನಗೊಳಿಸಿರುವ ಬಗ್ಗೆ ದಿನಾಂಕ 25.05.2007 ರಂದು ಹೊರಡಿಸಲಾದ ಎಫ್‌ಡಿ 3 ಪಿಇಎಸ್ 2007(3) ನೇ ಸಂಖ್ಯೆಯ ಅಧಿಸೂಚನೆ.

ಹಾಗೂ

7. 1968 ರ ಕರ್ನಾಟಕ ಅಬಕಾರಿ (ಅಬಕಾರಿ ಸುಂಕಗಳು ಮತ್ತು ಶುಲ್ಕಗಳು)ನಿಯಮಗಳ ನಿಯಮ 2, 2–ಎಡಿ ಮತ್ತು 2–ಎಇ, 2–ಎಎಫ್‌ಗೆ ತಿದ್ದುಪಡಿ ಮಾಡಿ ಹಾಗೂ 2ಬಿ, 2ಸಿ, 2ಡಿ, 2ಇ, 3ಬಿ, ಅನುಸೂಚಿ ಬಿ ಮತ್ತು ಅನುಸೂಚಿ ಸಿ ಯನ್ನು ಬಿಟ್ಟು ಬಿಡುವ ಬಗ್ಗೆ ದಿನಾಂಕ 25.05.2007 ರಂದು ಹೊರಡಿಸಲಾದ ಎಫ್‌ಡಿ 3 ಪಿಇಎಸ್ 2007 (4) ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುತ್ತೇನೆ.

ಶ್ರೀ ಎಂ.ಪಿ.ಪ್ರಕಾಶ್ (ಗೃಹ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರುಗಳು) ಅವರು;

1964ರ ಕರ್ನಾಟಕ ಸಿನಿಮಾ (ನಿಯಂತ್ರಣ) ಅಧಿನಿಯಮದ 22ರ ಪ್ರಕರಣದ ಮೇರೆಗೆ:

ಇಂಡಿಯನ್ ಇನಸ್ಟಿಟ್ಯೂಟ್ ಆಫ್ ಸೈನ್, ಬೆಂಗಳೂರು ಇವರ ಜಂಖಾನಾದಲ್ಲಿ ಚಲನಚಿತ್ರಗಳನ್ನು ಪ್ರದರ್ಶಿಸುವುದಕ್ಕೆ ಸಂಬಂಧಪಟ್ಟಂತೆ ಅನುಮತಿ ನೀಡಿ ದಿನಾಂಕ 26.04.2007 ರಂದು ಹೊರಡಿಸಲಾದ ಹೆಚ್‌ಡಿ 18 ಸಿಇನ್‌ಎ 2006ನೇ ಸಂಖ್ಯೆಯ ಆದೇಶವನ್ನು ಮಂಡಿಸುತ್ತೇನೆ.

ಶ್ರೀ ಡಿ.ಹೆಚ್.ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು) ಅವರ ಪರವಾಗಿ ಶ್ರೀ ಎಂ.ಪಿ.ಪ್ರಕಾಶ್ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು)

ಭಾರತ ಸಂವಿಧಾನದ 213(2) (ಎ) ಅನುಚ್ಛೇದದ ಮೇರೆಗೆ:

ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) (ವಿಶೇಷ ಉಪಬಂದಗಳು) ಗೆ ಸಂಬಂಧಿಸಿದಂತೆ ಹೊರಡಿಸಲಾದ ಸಂವ್ಯಶಾಇ 26 ಶಾಸನ 2007 ದಿನಾಂಕ 22.06.2007ರ ಆಧ್ಯಾದೇಶ ಸಂಖ್ಯೆ 1ನ್ನು ಮಂಡಿಸುತ್ತೇನೆ.

ಅಧ್ಯಕ್ಷರು : ಮಂಡಿಸಲಾಯಿತು.

ವಿಷಯ: ಪ್ರಕೃತಿ ವಿಕೋಪದಿಂದ ರಾಜ್ಯದಲ್ಲಿ ಉಂಟಾಗಿರುವ ಅನಾಹುತದ ಬಗ್ಗೆ

6. ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ:

ಶ್ರೀ ಎನ್. ಧರ್ಮಸಿಂಗ್ (ಮಾನ್ಯ ವಿರೋಧಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ನಾವು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇವೆ. ನಿಲುವಳಿ ಸೂಚನೆ ಬಗ್ಗೆ ಚರ್ಚೆ ಆಗಲೇ ಬೇಕು. ರಾಜ್ಯಕ್ಕೆ, ರಾಜ್ಯದ ಜನತೆಗೆ ಮತ್ತು ರೈತರಿಗೆ ಸಂಬಂಧಪಟ್ಟಂತೆ ಇತ್ತೀಚಿನ ದಿವಸಗಳಲ್ಲಿ ಪ್ರಕೃತಿ